# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406
ಮೈಸೂರು-570 005

ದಿನಾಂಕ:22/10/2024

ಡಿವಿ4/ಇತರೆ/273/2021-22

## ಸುತ್ತೋಲೆ

ವಿಷಯ: ಸಿಳ್ಳೇಕ್ಯಾತ ಸಮುದಾಯದ ತೊಗಲುಗೊಂಬೆ ಕಲೆಯ ಕುರಿತು ಅಧ್ಯಯನ ಮತ್ತು ತೊಗಲುಗೊಂಬೆ ಪ್ರದರ್ಶನ ನೀಡುತ್ತಿದ್ದ ಹಿರಿಯ ಸಲಾವಿದರ ಜೀವನ ಚರಿತ್ರೆ ಕುರಿತು ಅಧ್ಯಯನ ಕೈಗೊಳ್ಳಲು ಪ್ರಸ್ತಾವನೆ ಸಲ್ಲಿಸುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ನಿರ್ದೇಶಕರ ಕಛೇರಿ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಅಂಸಂಸಂ/ಸಿಬ್ಬಂದಿ/ಸಿಆರ್-12/ 2024-25, ದಿನಾಂಕ: 18/9/2024.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸಮಾಜ ಕಲ್ಯಾಣ ಇಲಾಖೆಯಿಂದ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆಗೆ 2024-25ನೇ ಸಾಲಿನ ವಾರ್ಷಿಕ ಅಂದಾಜು ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ. ಸದರಿ ಕ್ರಿಯಾ ಯೋಜನೆಯಲ್ಲಿ ಸಿಳ್ಳೇಕ್ಯಾತಾಸ್ ಸಮುದಾಯದ ತೊಗಲುಗೊಂಬೆ ಕಲೆಯ ಕುರಿತು ಅಧ್ಯಯನ ಮತ್ತು ತೊಗಲುಗೊಂಬೆ ಪ್ರದರ್ಶನ ನೀಡುತ್ತಿದ್ದು ಹಿರಿಯ ಕಲಾವಿಧರ ಜೀವನ ಚರಿತ್ರೆ ಕುರಿತು ಅಧ್ಯಯನ ಕೈಗೊಂಡು ಅನುಷ್ಠಾನಗೊಳಿಸಬೇಕಾಗಿರುವ ಹಿನ್ನಲೆಯಲ್ಲಿ ಲಲಿತ ಕಲೆ/ಸಂಸ್ಕೃತಿಯ ವಿಷಯದಲ್ಲಿ ಪಿ.ಹೆಚ್.ಡಿ ಪದವಿ ಪಡೆದು, ಸಂಶೋಧನಾ ಅನುಭವವಿರುವ ಸಂಶೋಧಕರ ಮಾಹಿತಿಯನ್ನು ಸಂಗ್ರಹಿಸಲು ಉದ್ದೇಶಿಸಿರುತ್ತಾರೆ.

ಅದರಂತೆ ಆಸಕ್ತ ಸಂಶೋಧಕರು ಪ್ರಸ್ತಾವನೆಯನ್ನು ಸಲ್ಲಿಸುವ ಪೂರ್ವದಲ್ಲಿ ಈ ಕೆಳಕಂಡ* ಷರತ್ತುಗಳನ್ನು ಪೂರೈಸಿದ ಸಂಶೋಧಕರ ಹೆಸರನ್ನು ಕಳುಹಿಸಿಕೊಡುವಂತೆ ತಿಳಿಸಿರುತ್ತಾರೆ (ಪ್ರತಿ ಲಗತ್ತಿಸಿದೆ).

1. ಸಂಶೋಧಕರು ಕಡ್ಡಾಯವಾಗಿ ಕಲೆ/ಲಲಿತ ಕಲೆ ಅಥವಾ ಕಲಾವಿಧರ ಜೀವನ ಚರಿತ್ರೆ ವಿಷಯದಲ್ಲಿ ಪಿ.ಹೆಚ್.ಡಿ ಪದವೀಧರರಾಗಿರಬೇಕು.
2. ಯಾವುದಾದರೂ ಲಲಿತ ಕಲೆ ಅಥವಾ ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡಿದ ಅನುಭವ ಇರಬೇಕು.
3. ಸಂಶೋಧಕರು ಸಿಳ್ಳೇಕ್ಯಾತ ಸಮುದಾಯದ ತೊಗಲುಗೊಂಬೆ ಕಲೆ ಬಗ್ಗೆ ಹಾಗೂ ತೊಗಲುಗೊಂಬೆ ಕಲಾವಿಧರ ಬಗ್ಗೆ ಅಧ್ಯಯನ ಮಾಡಬೇಕಾಗಿರುವುದರಿಂದ ಕ್ಷೇತ್ರ ಅಧ್ಯಯನ ಮಾಡಿರುವ ಅಥವಾ ಮಾಡಲು ಅರ್ಹತೆ ಹೊಂದಿದವರಾಗಿರಬೇಕು.
4. ಸಂಶೋಧನಾ ವರದಿಯನ್ನು ಕಾರ್ಯಾದೇಶ ಪಡೆದ 6 ತಿಂಗಳೊಳಗೆ ಪೂರ್ಣಗೊಳಿಸಲು ಅರ್ಹರಾಗಿರಬೇಕು.
5. ಸರ್ಕಾರದಿಂದ ಕಾಲ-ಕಾಲಕ್ಕೆ ಕೇಳಬಹುದಾದ ಮಾಹಿತಿಯನ್ನು ಸಕಾಲದಲ್ಲಿ ಒದಗಿಸಲು ಅರ್ಹತೆಯನ್ನು ಹೊಂದಿರಬೇಕು.
6. ಸಂಶೋಧನಾ ಕಾರ್ಯಕ್ಕೆ ಸೂಕ್ತ ಎಂದು ತಮ್ಮ ವಿಶ್ವವಿದ್ಯಾನಿಲಯ ಮಾನ್ಯ ಮಾಡಬಹುದಾದ ಅರ್ಹತೆ ಹೊಂದರಬೇಕು.

ಈ ಸಂಬಂಧ ಪ್ರಸ್ತಾವನೆ ಸಲ್ಲಿಸಬಯಸುವ ಆಸ್ತಕ ಸಂಶೋಧಕರ ವಿವರ ಹಾಗೂ ಸಂಶೋಧನೆ ಕೈಗೊಳ್ಳಲು ನಿರೀಕ್ಷಿಸುವ ಅನುದಾನದ ವೆಚ್ಚದ ವಿವರದೊಂದಿಗೆ ಈ ಪತ್ರ ತಲುಪಿದ 7 ದಿನಗಳೊಳಗೆ ಮೇಲಿನ ಷರತ್ತುಗಳಿಗೆ ಬದ್ಧರಾಗಿ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಅಥವಾ ಸಂವಹನ ನಡೆಸುವ ಅಗತ್ಯವಿದ್ದರೆ ದೂರವಾಣಿ ಸಂಖ್ಯೆ 9880096487/08022204821 ಗೆ ಸಂಪರ್ಕಿಸುವುದು ಅಥವಾ ಇ-ಮೇಲ್ ambedkarbhavana@gmail.com ಮೂಲಕ ಸಂಪರ್ಕಿಸಬಹುದಾಗಿದೆ.

ಕುಲಸಚಿವ

ಇವರಿಗೆ:

1. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು, ಮಾನಸಗಂಗೋತ್ರಿ, ಮೈಸೂರು.
2. ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.
3. ನಿರ್ದೇಶಕರು (ಪ್ರಭಾರ), ಸಿ.ಎಸ್.ಎಸ್.ಇ.ಐ.ಪಿ, ಮಾನಸಗಂಗೋತ್ರಿ, ಮೈಸೂರು.
4. ಸಂಯೋಜಕರು, ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು-ಸದರಿ ಸುತ್ತೋಲೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಅಗತ್ಯ ಕ್ರಮಕೈಗೊಳ್ಳುವುದು.
5. ಕಛೇರಿ ಪ್ರತಿ.

Scanned with OKEN Scanner